ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 25.06.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್.ಡಬ್ಲ್ಯೂ ವಕೀಲರಿಂದ

1. ನಾನು ವಾದ ಮತ್ತು ಪ್ರತಿವಾದ ಪತ್ರಗಳ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯ ತಂದೆ ಈಗ ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈರಪ್ಪರವರಿಗೆ ಒಬ್ಬ ಗಂಡು ಮಗ ವೆಂಕಟೇಶ ಮತ್ತು ನಾಲ್ಕೈದು ಜನ ಹೆಣ್ಣು ಮಕ್ಕಳಿದ್ದು ಅವರ ಹೆಸರು ಗೊತ್ತಿಲ್ಲ. ಹೆಣ್ಣು ಮಕ್ಕಳ ಪೈಕಿ ಒಬ್ಬರು ಮೃತರಾಗಿರುತ್ತಾರೆ, ಉಳಿದವರು ಬದುಕಿರುತ್ತಾರೆ. ಈರಪ್ಪ ಮೃತರಾದ ನಂತರ ದಾವಾ ವಿಚಾರವಾಗಿ ಅವರ ಹೆಣ್ಣು ಮಕ್ಕಳಿಗೆ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಗೂ ಮತ್ತು ಈರಪ್ಪರವರಿಗೂ ಈರಪ್ಪ ಬದುಕಿದ್ದಾಗ ವ್ಯವಹಾರ ಆಗಿರುತ್ತದೆ. ನಾನು ಸಹ ನೋಂದಣಿ ಕಛೇರಿಗೆ ನನ್ನ ತಂದೆಯ ಜೊತೆ ಬಂದಿದ್ದೆ, ಆದರೆ ನನ್ನ ತಂದೆ ಹಿರಿಯರಾದ ಕಾರಣ ಅವರ ಹೆಸರಿನಲ್ಲಿ ಆಧಾರ ಪತ್ರ ಆಗಿರುತ್ತದೆ. ಪತ್ರ ಬರೆದ ನಂತರ ಪ್ರತಿವಾದಿಗಳಿಗೆ ಮತ್ತು ಈರಪ್ಪರವರಿಗೆ ಹಣವನ್ನು ಪಾವತಿ ಮಾಡಿರುತ್ತೇವೆ. ನಾನು ಮತ್ತು ನನ್ನ ತಂದೆ ಇಬ್ಬರೂ ಸೇರಿ ಹಣ ನೀಡಿರುತ್ತೇವೆ. ಈ ಬಗ್ಗೆ ನನ್ನ ದಾವೆಯಲ್ಲಿ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ಪತ್ರ ನೋಂದಣಿಯಾದ ನಂತರ ಪ್ರತಿವಾದಿಗಳು ಮತ್ತು ನನ್ನ ತಂದೆಯ ನಡುವೆ ಮುಂದುವರೆದು ಯಾವುದೇ ವ್ಯವಹಾರ ಆಗಿರುವುದಿಲ್ಲ. ಮುಂದುವರೆದ ವ್ಯವಹಾರವು ವಾದಿಯಾದ ನನ್ನ

ತಂದೆ ಮತ್ತು ಈರಪ್ಪರವರ ನಡುವೆಯಾಗಿದ್ದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ನರ ದೌರ್ಬಲ್ಯ ಇರುವ ಕಾರಣ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯಲು ಆಗುವುದಿಲ್ಲ. ಈ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿನಾಂಕ 14.12.2012 ರಂದು ಈರಪ್ಪ ಜೀವಂತ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಿನ ವಾದಿಯಾದ ನನ್ನ ತಂದೆ ಮತ್ತು ಮೃತ ಈರಪ್ಪ ರವರ ನಡುವೆ ಏನು ವ್ಯವಹಾರ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ದಿನ ನನ್ನ ತಂದೆ ಹಿರಿಯ ವಕೀಲರಾದ ಶ್ರೀ ಎನ್ ಆರ್ ರವಿಶಂಕರ್ ರವರಿಂದ ಈರಪ್ಪರವರಿಗೆ ನೋಟೀಸ್ ಜಾರಿಗೊಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಜಾರಿಮಾಡಿದ 10 ವರ್ಷದ ನಂತರ ದಾವಾ ದಾಖಲಾಗಿದೆ ಎಂದರೆ ಸಾಕ್ಷಿಯು ನಾವು ಪದೇ ಪದೇ ಹಣ ಕೇಳುತ್ತಲೇ ಇದ್ದೆವು ಪ್ರತಿವಾದಿಗಳು ಹಣ ನೀಡದೆ ಇದ್ದ ಕಾರಣ ಕಾಲಮಿತಿ ಒಳಗಡೆ ದಾವಾ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಹಿಂದೆ ನೀಡಿದ ನೋಟೀಸಿನ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಯಾವುದೇ ಮಾಹಿತಿ ನೀಡಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮೃತ ಈರಪ್ಪರವರು ತಮ್ಮ ಜೀವಿತಾ ಕಾಲದಲ್ಲಿ ಒಳ್ಳೆಯ ತನಕ್ಕೆ ಹೆಸರು ಮಾಡಿದ್ದರು ಎಂದರೆ ಸರಿ. 2012 ರಲ್ಲಿಯೇ ಮೃತ ಈರಪ್ಪ ರವರು ಹಣ ಮರು ಪಾವತಿ ಮಾಡಿದ್ದು ಆ ಕಾರಣದಿಂದ ನಾನು ತಕ್ಷಣ ದಾವಾ ದಾಖಲಿಸಲಿಲ್ಲ ಎಂದರೆ ಸಾಕ್ಷಿಯು ಯಾವುದೇ ಹಣ ಪಾವತಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದ ದಾವಾ ಶುಲ್ಕವನ್ನು ಪಾವತಿ

ಮಾಡಬೇಕಾಗುತ್ತದೆ ಹಾಗೂ ಹಣ ಕೊಡುತ್ತಾರೆ ಎಂದು ಸುಮ್ಮನಿದ್ದೆವು ಹಾಗೂ ಪ್ರತಿವಾದಿಗಳು ನೋಟೀಸಿಗೆ ಉತ್ತರ ನೀಡಿಲ್ಲ ಎಂದು ನುಡಿಯುತ್ತಾರೆ. ನೋಟೀಸ್ ನೀಡಿದ ಕೂಡಲೇ ಪ್ರತಿವಾದಿಗಳು ಮತ್ತು ಅವರ ತಂದೆ ಈರಪ್ಪ ಸಂಪೂರ್ಣ ಹಣವನ್ನು ಪಾವತಿ ಮಾಡಿದ್ದು, ದುರುದ್ದೇಶದಿಂದ ಹಾಗೂ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ದಾವಾ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಣ ಕೊಟ್ಟ ಕೂಡಲೇ ನನ್ನ ತಂದೆ ಆಧಾರ ಬಿಡುಗಡೆ ಮಾಡಿಕೊಡಲು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ.

4. ದಿನಾಂಕ 17.10.2020 ರಂದು ಪ್ರತಿವಾದಿಗಳಿಗೆ ಶ್ರೀ ಮಹೇಶ್ ವಕೀಲರ ಮುಖಾಂತರ ನೋಟೀಸ್ ನೀಡಿದ್ದೆವು ಎಂದರೆ ಸರಿ. ಪ್ರತಿವಾದಿಗಳು ಸದರಿ ನೋಟೀಸಿಗೆ ಹಣವನ್ನು ಈಗಾಗಲೇ ಪಾವಾತಿ ಮಾಡಲಾಗಿದೆ ಎಂದು ಜವಾಬು ನೀಡಿರುತ್ತಾರೆ. ತದನಂತರ ಮತ್ತೆ ನಾವು ಶ್ರೀ ಅನಂತರಾಮಯ್ಯ ವಕೀಲರ ಮುಖಾಂತರ ದಿನಾಂಕ 24.02.2021 ರಂದು ನೋಟೀಸ್ ಜಾರಿಗೊಳಿಸಿದ್ದೆವು ಎಂದರೆ ಸರಿ. ಸದರಿ ನೋಟೀಸ್ ಮುಂಚೆ ಯಾವುದೇ ದಾವಾ ದಾಖಲಿಸಿರಲಿಲ್ಲ. ಪ್ರಸ್ತುತ ದಾವೆಯನ್ನು ದಾಖಲಿಸಿದ ದಿನಾಂಕ ನೆನಪಿಲ್ಲ. ನಾವು ನೀಡಿದ ಎಲ್ಲಾ ನೋಟೀಸ್‌ಗಳಿಗೂ ಪ್ರತಿವಾದಿಗಳು ಪ್ರತ್ಯುತ್ತರ ನೀಡಿದ್ದರೂ ಎಂದರೆ ಸಾಕ್ಷಿಯು ಶ್ರೀ ರವಿಶಂಕರ್ ವಕೀಲರ ಮುಖಾಂತರ ಕಳುಹಿಸಿರುವ ನೋಟೀಸಿಗೆ ಜವಾಬು ನೀಡಿಲ್ಲ ಎಂದು ನುಡಿಯುತ್ತಾರೆ.

5. ಆಧಾರ ಮಾಡಿಕೊಂಡಿರುವ ಜಮೀನನ್ನು ಬಿಟ್ಟು ಅದರ ಪಕ್ಕದಲ್ಲಿಯೆ ನಮಗೆ ಜಮೀನು ಇದೆ. ಪ್ರತಿವಾದಿಗಳು ನಮ್ಮ ವಿರುದ್ಧ ಅಸಲು ದಾವಾ ಸಂಖ್ಯೆ 383/2020 ನ್ನು ದಾಖಲಿಸಿದ ನಂತರ ಪ್ರಸ್ತುತ ದಾವಾ ದಾಖಲಿಸಿರುತ್ತೇವೆ ಎಂದರೆ ಸಾಕ್ಷಿಯು ಗೋಮಾಳದ ವಿಚಾರವಾಗಿ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಅವರ ಪರವಾಗಿ ಮಧ್ಯಂತರ ಆದೇಶದ ಆದ ನಂತರ ಪ್ರಸ್ತುತ ದಾವೆಯನ್ನು ಪ್ರತಿವಾದಿಗಳು ಹಣ ಪಾವತಿಸಿದ್ದರೂ ಕೂಡ ಸುಳ್ಳು ದಾವಾ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯಾದ ವಾದಿಯು ನ್ಯಾಯಾಲಯಕ್ಕೆ ಹಾಜರಾಗದರೆ ಸತ್ಯಾಂಶ ತಿಳಿಯುತ್ತದೆ ಎಂದು ನನ್ನ ಮುಖಾಂತರ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಣ ಪಾವತಿ ಮಾಡಿದ್ದು ನನ್ನ ಮತ್ತು ಪ್ರತಿವಾದಿಗಳ ನಡುವೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಇರುವ ಕಾರಣ ಪ್ರಸ್ತುತ ಸುಳ್ಳು ದಾವಾ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.